ಬಸ್‌ನಲ್ಲಿ ಬಂದಿರತಕ್ಕಂಥ ಜನರೇ ಆ ದರೋಡೆ ಮಾಡಿದ್ದಾರೆ. ಆದು ಬಿಟ್ಟರೆ ಬೇರೆ ಯಾವುದೇ ಹದ್ದಾರಿ ದರೋಡೆಯಾಗಿಲ್ಲ.

ವಿ. ಎಸ್. ಆಚಾರ್.—ಚೇಸ್ ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾರು ಚೇಸ್ ಮಾಡಿದ್ದಾರೆ ಆದು ನಾವು ಕಂಡುಹಿಡಿಯಬೇಕಾಗಿದ್ದು ಅದಕ್ಕಾಗಿ ಸಿ ಓ ಡಿ ಮುಖಾಂತರ ತನಿಖೆ ಮಾಡಿಸಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ನಾನು ತಮಗೆ ರೂಲ್ 334ರ ಪ್ರಕಾರ ಒಂದು ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ. ಎಸ್. ಕೃಷ್ಣನ್.—4-5 ದಿವಸಗಳಿಂದ ನನಗೆ ಹೇಳಿ ಹೇಳಿ ಸಾಕಾಗಿ ಹೋಗಿದೆ. ಸಂಬಂಧಪಟ್ಟ ಮಂತ್ರಿಗಳು ಬರುತ್ತಿಲ್ಲ.

ಅಧ್ಯಕ್ಷರು.—ನಾನು ಆದನ್ನು ಅವರಿಗೆ ಕಳುಹಿಸಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೂ ಆಗಿಲ್ಲವೆಂದರೆ ಏನು ಮಾಡೋಣ?

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುವುದೇನೆಂದರೆ,.....

ಅಧ್ಯಕ್ಷರು.— 4 ಗಂಟೆಯಾಯಿತು. ಇನ್ನು ಬಹಳ ಸಮಯ ತೆಗೆದುಕೊಳ್ಳುವುದು ಬೇಡ. ಅದು ಸೂಕ್ತವಲ್ಲ.

SRI. M. S. KRISHNAN.—I request the Chair to direct the concerned Minister to be present in the House.

ಶ್ರೀ ಎಂ. ರಘುಪತಿ.—ಇದಕ್ಕೆ ಸಂಬಂಧಪಟ್ಟ ಮಂತ್ರಿಯವರು ಆ ಸದನದಲ್ಲಿದ್ದಾರೆ.

MR. SPEAKER.—I cannot do it under Rule 334. You know what the rule says. According to Rule 334 you can only bring the matter to the notice of the House not even to the Government.

SRI M. S. KRISHNAN.—My point is that the concerned Minister is not present in the House for the last three days. I have been waiting to raise this issue when the Minister is present in the House....

* ಶ್ರೀ ಎಂ. ರಘುಪತಿ.—ಸರಿ ನಾಳೆ ತೆಗೆದುಕೊಳ್ಳೋಣ

ಶ್ರೀ ಎಂ. ಎಸ್. ಕೃಷ್ಣನ್.—ನಾನು ಈ ಪ್ರಶ್ನೆ ಇಲ್ಲಿ ಎತ್ತಿದಾಗ ಅದಕ್ಕೆ ಉತ್ತರ ಕೊಡದೇ ಇದ್ದರೆ ಅದಕ್ಕೆ ಯಾರು ಜವಾಬ್ದಾರರು?

ಅಧ್ಯಕ್ಷರು.—ಅದಕ್ಕೆ ನಾನು ಜವಾಬ್ದಾರನಲ್ಲ.

Please ask the Hon'ble Minister to be present tomorrow.

ಶ್ರೀ ಎಂ. ರಘುಪತಿ:—ಸರಿ ಸ್ವಾಮಿ.

ಗಮನ ಸೆಳೆಯುವ ಸೂಚನೆಗಳು

ವಿಷಯ: ಹುಬ್ಬಳ್ಳಿಯಲ್ಲಿರುವ ಕರ್ನಾಟಕ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜಿಗೆ ಅನುದಾನ ಕೊಡದಿರುವ ಬಗ್ಗೆ.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ, ನಾನು 1981-82 ಮತ್ತು 1982-83ನೇ ಸಾಲಿಗೆ ಕರ್ನಾಟಕ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜ್, ಹುಬ್ಬಳ್ಳಿ, ಇವರಿಗೆ ಅನುದಾನವನ್ನು ಕೊಡದೆ ಇರುವ ಬಗ್ಗೆ

---

* ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.

ಮತ್ತು ಅದರಿಂದ ವಿದ್ಯಾರ್ಥಿಗಳಿಗೆ ಊಂಟಾದ ತೊಂದರೆ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಮಂತ್ರಿ).— ಹುಬ್ಬಳ್ಳಿಯ ಕರ್ನಾಟಕ ಹೋಮಿಯೋ ವೈದ್ಯಕೀಯ ವಿದ್ಯಾಲಯದ ಆಡಳಿತ ಮಂಡಳಿಯು 1981–82 ಮತ್ತು 1982–83ನೇ ಸಾಲುಗಳಿಗೆ ಧನ ಸಹಾಯ ಪಡೆಯಲು ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಧನ ಸಹಾಯ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರವು ಈ ವಿದ್ಯಾಲಯಕ್ಕೆ ಗ್ರಾಜುಯೇಟ್ ಕೋರ್ಸ್ ಮತ್ತು ಡಿಪ್ಲೊಮೋ ಕೋರ್ಸ್‌ಗಳಿಗೆ ತಲಾ ಪ್ರವೇಶ ಸಾಮರ್ಥ್ಯವನ್ನು 30 ವಿದ್ಯಾರ್ಥಿಗಳು ಎಂದು ನಿಗದಿಪಡಿಸಿದೆ. ಮತ್ತು ಗ್ರಾಜುಯೇಟ್ ಕೋರ್ಸಿನ ಕರ್ನಾಟಕ ವಿದ್ಯಾರ್ಥಿಗಳಿಗೆ ರೂಪಾಯಿ 3,000–00 ಗಳಿಂದಲೂ, ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ರೂಪಾಯಿ 6,000–00 ಎಂದೂ ಮೂಲಧನ ಶುಲ್ಕ (ಕ್ಯಾಪಿಟೇಶನ್) ಮತ್ತು ಡಿಪ್ಲೊಮೋ ಕೋರ್ಸಿನ ಕರ್ನಾಟಕ ವಿದ್ಯಾರ್ಥಿಗಳಿಗೆ ರೂ. 2,000–00 ಗಳೆಂದೂ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ರೂ. 4,000–00 ಎಂದೂ ಮೂಲಧನ ಶುಲ್ಕ ನಿಗಧಿಪಡಿಸಿದೆ. 1981–82ರಲ್ಲಿ ಈ ವಿದ್ಯಾಲಯದಲ್ಲಿ 35 ವಿದ್ಯಾರ್ಥಿಗಳನ್ನು ಡಿಪ್ಲೊಮೋ ಕೋರ್ಸ್‌ಗೂ. 49 ವಿದ್ಯಾರ್ಥಿಗಳನ್ನು ಗ್ರಾಜುಯೇಟ್ ಕೋರ್ಸ್‌ಗೂ ಪ್ರವೇಶ ನೀಡಲಾಗಿದೆ. ಈ ವಿದ್ಯಾಲಯದ ಲೆಕ್ಕ ಪತ್ರಗಳನ್ನು 1983ರ ಮೇ ತಿಂಗಳಿನ ದಿನಾಂಕ 9 ಮತ್ತು 10 ರಂದು ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶನಾಲಯದ ಆಡಳಿತಾಧಿಕಾರಿಯು ತನಿಖೆ ನಡೆಸಲಾಗಿ ದಿನಾಂಕ 16–7–1979 ರಿಂದ 26–2–1983ರವರೆಗೆ ವಿದ್ಯಾರ್ಥಿಗಳಿಂದ ಸಾಮಾನ್ಯ ಶುಲ್ಕಗಳನ್ನು ಬಿಟ್ಟು ವಿದ್ಯಾಲಯದ ಕಟ್ಟಡಕ್ಕೆ ಮತ್ತಿತರ ಕಾರ್ಯಗಳಿಗೆಂದು ರೂಪಾಯಿ 4,25,350–00 ಗಳನ್ನು ವಸೂಲು ಮಾಡಲಾಗಿದೆ. ಆದ್ದರಿಂದ ವಿದ್ಯಾಲಯವು ಆರ್ಥಿಕ ಮುಗ್ಗಟ್ಟಿನಿಂದ ಬಳಲುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಬಿ. ಜಿ. ಬಣಕಾರ್.—ಅಧ್ಯಕ್ಷರೇ, 1981–82 ಮತ್ತು 1982–83ನೇ ಸಾಲಿಗೆ ಅವರು ಅರ್ಜಿಯನ್ನು ಸಂಬಂಧಪಟ್ಟವರಿಗೆ ಹಾಗೂ ಮುಖ್ಯ ಮಂತ್ರಿಯವರಿಗೆ ಕೊಟ್ಟಿರುತ್ತಾರೆ. ಆದರೆ ನಮೂದು (ಪ್ರಿಸ್ಕ್ರೈಬ್ಡ್) ಮಾಡಿರುವ ಪ್ರೊಫಾರ್ಮದಲ್ಲಿ ಕೊಟ್ಟಿಲ್ಲ ಎಂಬ ಕಾರಣದಿಂದ ಅವರಿಗೆ ಅನುದಾನವನ್ನು ಕೊಟ್ಟಿಲ್ಲ. ಆದ್ದರಿಂದ ಈಗಲಾದರೂ ನಮೂದು ಮಾಡಿರುವ ಪ್ರೊಫಾರ್ಮದಲ್ಲಿ ಅರ್ಜಿ ಕೊಟ್ಟರೆ ಅದನ್ನು ಪರಿಶೀಲಿಸಿ ಗ್ರಾಂಟ್ ಕೊಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, 1981–82 ಮತ್ತು 1982–83ನೇ ಸಾಲಿಗೆ ಧನ ಸಹಾಯ ಕ್ಕಾಗಿ ಅವರು ಅರ್ಜಿಯನ್ನು ಕೊಟ್ಟಿಲ್ಲ, ಈಗ ಅದಕ್ಕೋಸ್ಕರ ಹಣ ಕೊಡುತ್ತೀರಾ ಎಂದು ಕೇಳಿದರೆ ಈಗ ಯಾವ ರೀತಿ ಕೊಡಲು ಸಾಧ್ಯ ? ಇದಲ್ಲದೆ ಇದನ್ನು ಪರಿಶೀಲನೆ ಮಾಡಿದ್ದು ಹಿಂದಿನ ಸರ್ಕಾರ ಮತ್ತು ಈ ವಿದ್ಯಾಶಾಲೆಯವರು ಸಾಕಷ್ಟು ಕ್ಯಾಪಿಟೇಷನ್ ಫೀ ಕಲೆಕ್ಟ್ ಮಾಡಿದ್ದಾರೆ. ಮತ್ತು ಈಗ ಆರ್ಥಿಕ ಮುಗ್ಗಟ್ಟು ಇಲ್ಲದಿರುವುದರಿಂದ ಅವರಿಗೆ ಈ ಅನುದಾನದ ಅಗತ್ಯವಿಲ್ಲವೆಂದು ಭಾವಿಸಿಕೊಂಡಿದ್ದೇನೆ.

ಶ್ರೀ ಬಿ. ಆರ್. ಯಾವಗಲ್.—ಅಧ್ಯಕ್ಷರೇ, ಈ ಸಂಸ್ಥೆ 10–16 ವರ್ಷದಿಂದ ಇರುವ ಸಂಸ್ಥೆ. ಇದು ಹಿಂದುಳಿದ ಪ್ರದೇಶಗಳಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪರಿಜ್ಞಾನ ಕೊಡತಕ್ಕಂಥ ಸಂಸ್ಥೆ. ಇವರು ಹಳ್ಳಿಗಾಡಿನಿಂದ ಬರತಕ್ಕಂಥ ವಿದ್ಯಾರ್ಥಿಗಳನ್ನು ವೈದ್ಯರನ್ನಾಗಿ ಮಾಡಿ ಕಳುಹಿಸುತ್ತಿದ್ದಾರೆ. ಇದಲ್ಲದೆ ಇದು ಅನುಕೂಲತೆಗಳು ಇರುವ ಸಂಸ್ಥೆ. ಒಂದು ಕುತಂತ್ರದ ಮೂಲಕ ಇದಕ್ಕೆ ದೊರೆಯುವ ಸೌಲಭ್ಯ ಸಿಕ್ಕಬಾರದು ಎನ್ನುವ ಉದ್ದೇಶದಿಂದ ಅದಕ್ಕೋನಾದರೂ ಎರಡು ಮೂರು ವರ್ಷಗಳ ಅವಧಿಗೆ ಹಣ ಸಿಗದಿರುವ ಹಾಗೆ ಪ್ರಯತ್ನ ನಡೆದಿದೆಯೆ ? ಹಿಂದೆ ಈ ಸಂಸ್ಥೆಯ ಮೇಲೆ ಬೇಕೆಂತಲೇ ಒಂದು ಆಪಾದನೆ ಮಾಡಿ, ಅದು ತನಿಖೆಯಾಗಿದೆ. ಅದರ ಆಧಾರದ ಮೇಲೆ ಈ ರೀತಿ ಮಾಡಿದ್ದರೆ ಆಪಾದನೆ ನಿಜವೇ ಎಂದು ಕಂಡುಹಿಡಿಯಲು ಇನ್ನೊಬ್ಬ ಅಧಿಕಾರಿಯನ್ನು ಕಳುಹಿಸಿ ಅದನ್ನು ಪರಿಶೀಲಿಸಿ ಅವರಿಗೆ ಅನುದಾನ ಸಿಗುವಂತೆ ಮಾಡುವುದಕೆ ಸರ್ಕಾರಕ್ಕೆ ಏನಾದರೂ ತೊಂದರೆ ಇದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, 1981–82ಮತ್ತು 1982–83ನೇ ಸಾಲಿಗೆ ಹಣ ಸಿಗದೇ ಇದ್ದುದರಿಂದ ಈಗ ಪರಿಶೀಲಿಸುವಂತೆ ಮಾನ್ಯ ಸದಸ್ಯರಾದ ಶ್ರೀ ಯಾವಗಲ್ ಅವರು ಕೇಳುತ್ತಿದ್ದಾರೆ. ಈ ವೈದ್ಯಕೀಯ ಕಾಲೇಜಿನವರಿಂದ ಅರ್ಜಿಗಳು ಬಾರದೇ ಇರುವಾಗ ಹೇಗೆ ದುಡ್ಡು ಕೊಡುವುದೆಂದು ನಾನು

ಕೇಳುತ್ತೇನೆ. ಈ ದೃಷ್ಟಿಯಿಂದ ದುಡ್ಡು ಕೇಳತಕ್ಕಂಥದ್ದು ಸಮಂಜಸವಾದುದಲ್ಲ. 1981–82ರಲ್ಲಿ ಅರ್ಜಿ ಬಂದಿಲ್ಲ ಮತ್ತು 1982–83ಕ್ಕೂ ಕೂಡ ಬಂದಿಲ್ಲ.

ಶ್ರೀ ಬಿ. ಆರ್. ಯಾವಗಲ್.—1981ರವರೆಗೆ ಕೊಟ್ಟಿರುವ ವಿವರಗಳೇನು ?

ಶ್ರೀ ಪಿ. ಜಿ. ಆರ್ ಸಿಂಧ್ಯ.—1978ರಲ್ಲಿ ಮೂವತ್ತು ಸಾವಿರ, 1979ರಲ್ಲಿ 34 ಸಾವಿರ, ಮತ್ತು 1980ರಲ್ಲಿ 49 ಸಾವಿರ ರೂಪಾಯಿಗಳನ್ನು ಸರ್ಕಾರದಿಂದ ತೆಗೆದುಕೊಂಡಿದ್ದಾರೆ. ಕೊಡಬಾರದು ಎಂದೇನಿಲ್ಲ.

ಶ್ರೀ ಬಿ. ಆರ್. ಯಾವಗಲ್.—ಅರ್ಜಿಯನ್ನು ಸಲ್ಲಿಸಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಕ್ರಮಬದ್ಧವಾಗಿ ಅರ್ಜಿಯನ್ನು ಕಳಿಸಿಲ್ಲದೇ ಇರಬಹುದು. ಆ ರೀತಿ ಕೊಟ್ಟಿರದೆ ಈಗ ಯೋಗ್ಯ ಮಾಹಿತಿ ಪ್ರಕಾರ ಅರ್ಜಿಯನ್ನು ಕೊಟ್ಟರೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮುಖ್ಯ ಮಂತ್ರಿಯವರಿಗೆ ಅರ್ಜಿ ಕೊಟ್ಟರೆ ಅದು ಅರ್ಜಿಯೇ ಅಲ್ಲವೆಂದು ನಾನು ಹೇಳುತ್ತಿಲ್ಲ. 1981–82ರಲ್ಲಿ ಅರ್ಜಿ ಕೊಡದೇ ಇದ್ದರೆ ಈಗ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಮುಂದೆ ಬರತಕ್ಕಂಥ ವರ್ಷಗಳಲ್ಲಿ ಆ ಸಂಸ್ಥೆ ಸರಿಯಾಗಿ ನಡೆಯುತ್ತದೆ ಎಂದು ಕಂಡು ಬಂದರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಧಾರವಾಡದಲ್ಲಿ ಇರತಕ್ಕಂಥ ಆಡಳಿತ ಮಂಡಳಿ ಮತ್ತು ಹುಬ್ಬಳ್ಳಿಯಲ್ಲಿರತಕ್ಕಂಥ ಆಡಳಿತ ಮಂಡಳಿಯ ನಡುವೆ ಸರಿಯಾದ ಬಾಂಧವ್ಯ ಇಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಈಗಿರತಕ್ಕಂಥ ಹುಬ್ಬಳ್ಳಿ ಹೋಮಿಯೋಪತಿ ಕಾಲೇಜನ್ನು ಸರಿಯಾಗಿ ನಡೆಸುತ್ತಿಲ್ಲವೆಂದು ಸಾಕಷ್ಟು ದೂರುಗಳು ಸರ್ಕಾರಕ್ಕೆ ಬಂದಿವೆ. ಅಲ್ಲಿರತಕ್ಕಂಥ ಪ್ರಯೋಗಾಲಯ ಸರಿಯಿಲ್ಲ. ವಿದ್ಯಾರ್ಥಿಗಳು ಕೂಡ ಅಲ್ಲಿ ಮುಷ್ಕರ ಮಾಡಿದ್ದು ತಮಗೆ ಗೊತ್ತಿರಬಹುದು. ಹೇಗಾದರೂ ಮಾಡಿ ಹುಬ್ಬಳ್ಳಿಯ ಕಾಲೇಜನ್ನು ಮುಗಿಸಿಬಿಡಬೇಕೆಂದು ಧಾರವಾಡದ ಕಾಲೇಜಿನವರು ಪ್ರಯತ್ನಿಸುತ್ತಿದ್ದಾರೆ. ಈ ಕಾಲೇಜನ್ನು ಮುಗಿಸಬೇಕೆಂದು ಅವರು ಪ್ರಯತ್ನ ಪಡುತ್ತಾರೆ. ಈ ತರಹದಲ್ಲಿ ನಡೆಯುತ್ತಿದೆ. ನಾವೀಗ ಕ್ಯಾಪಿಟೇಷನ್ ಶುಲ್ಕ ರದ್ದುಮಾಡಬೇಕೆಂದು ಹೊರಟಿರುವಾಗ ಇಬ್ಬರೂ ಕೂಡ ಬಿಟ್ಟುಬಿಡುತ್ತಾರೆಂದು ತೋರುತ್ತದೆ. ಇಂತಹ ಪ್ರಶ್ನೆ ಬಂದಾಗ ಸರ್ಕಾರದವರು ಅದನ್ನು ತೆಗೆದುಕೊಳ್ಳುವುದಕ್ಕೆ ಕ್ರಮ ಕೈಗೊಳ್ಳುತ್ತದೆ.

ಶ್ರೀ ಬಿ. ಆರ್. ಯಾವಗಲ್.—ಈ ಸಂಸ್ಥೆಯನ್ನು ಉಳಿಸಲಿಕ್ಕೆ en-mass ಹೋಗಿ ಎಂದು ಹೇಳುವುದು ಸರಿಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ವಿದ್ಯಾರ್ಥಿಗಳು ಧಾರವಾಡ ಕಾಲೇಜಿನಲ್ಲಿ ಸೇರಿಕೊಳ್ಳುವುದಕ್ಕೆ ಅವಕಾಶ ಬಿಟ್ಟುಕೊಡಲಾಗಿದೆ. ಈ ವಿದ್ಯಾ ಸಂಸ್ಥೆಯನ್ನು ನಡೆಸುವುದಕ್ಕೆ ಆಗುವುದಿಲ್ಲವೆಂದು ಕಂಡುಬಂದರೆ ಸರ್ಕಾರ ಒಂದು ತೀರ್ಮಾನ ಕೈಗೊಳ್ಳುತ್ತದೆ. ಅದನ್ನು ಬೇರೆ ರೀತಿಯಲ್ಲಿ ವಿಚಾರ ಮಾಡೋಣ.

ಶ್ರೀ ಬಿ. ಜಿ. ಬಣಕಾರ್.—ಆರ್ಥಿಕವಾಗಿ ಈ ಸಂಸ್ಥೆ ಸುಸ್ಥಿತಿಯಲ್ಲಿದೆ ಎಂದು ತಾವು ಹೇಳಿದ್ದಿರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆದರೆ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲತೆಗಳನ್ನೂ ಕಲ್ಪಿಸಿಕೊಡುತ್ತಿದೆ ಎಂದು ನಾನು ಹೇಳಿಲ್ಲ.

ಶ್ರೀ ಬಿ. ಜಿ. ಬಣಕಾರ್.—ಇದರಲ್ಲಿ ರಾಜಕೀಯ ಹಿನ್ನೆಲೆ ಇದೆ. ಧಾರವಾಡದಲ್ಲಿ ಹೋಮಿಯೋಪತಿ ಕಾಲೇಜನ್ನು ಮುಚ್ಚಿಸಬೇಕೆಂದು ದೂರುಗಳು ಬಂದಾಗ ಹಿಂದಿನ ಆರೋಗ್ಯ ಮಂತ್ರಿ ಶ್ರೀ ಅಬ್ದುಲ್ ಸಮದ್ ಅವರು ತನಿಖೆ ಮಾಡಿ ವರದಿ ಒಪ್ಪಿಸಲು ಡೈರೆಕ್ಟರ್ ಆಫ್ ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್ ಅವರನ್ನು ಕಳಿಸಿದ್ದರು. ಆದರೆ ಅವರು ತಾವು ಹೋಗದೆ ಶ್ರೀ ನಜೀರ್ ಸಾಹೇಬ್ ಅವರನು ತನಿಖೆ ಮಾಡಲು ಕಳುಹಿಸಿದ್ದರು. ಅವರು ತನಿಖೆಯನ್ನು ಸರಿಯಾಗಿ ಮಾಡದೆ ಈ ಸಂಸ್ಥೆಯ ಪರವಾಗಿ ಕೆಲವು ಸಂಗತಿಗಳನ್ನು ಸೃಷ್ಟಿಸಿ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿದರು. ಶ್ರೀ ಶೇಖರ್ ಎನ್ನುವರು ಪ್ರಾರಂಭ ಮಾಡಿದ ಕಾಲೇಜಿಗೆ ಅದು ಸರಿಯಾದ ಕಾಲೇಜು ಅಲ್ಲ ಎಂದು ಕಂಡುಬಂದರೂ ಕೂಡ ಅದಕ್ಕೆ ಹಿಂದಿನ ಸರ್ಕಾರದವರು ರಕ್ಷಣೆಯನ್ನು ಕೊಟ್ಟಿರುತ್ತಾರೆ. ಇದರ ಬಗ್ಗೆ ಸರಿಯಾದ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಮೊದಲೇ ಹೇಳಿದ ಹಾಗೆ ಈ ಕಾಲೇಜನ್ನು ಮುಚ್ಚುವುದು ಅಥವಾ ಆ ಕಾಲೇಜನ್ನು ಮುಚ್ಚುವ ಪ್ರಶ್ನೆ ಉದ್ಭವಿಸುವುದಿಲ್ಲ. ಬಹುಶಃ ಎರಡೂ ಕಾಲೇಜುಗಳನ್ನು ಅವರವರೇ ಮುಚ್ಚಿಬಿಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇವುಗಳು ಸರಿಯಾಗಿ ನಡೆಯುವ ದೃಷ್ಟಿಯಿಂದ

ಯಾರಿಗೂ ಅನ್ಯಾಯವಾಗದಹಾಗೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿಯಾಗಿದೆ. ಹಿಂದೆ ನಡೆದ ತನಿಖೆ ಅಸಮರ್ಪಕವಾಗಿದ್ದರೆ, ಅದರ ಬಗ್ಗೆ ವಿಚಾರಣೆ ಮಾಡಲಿಕ್ಕೆ ನಾವು ಹಿಂದೆ ಸರಿಯುವುದಿಲ್ಲ.

ಶ್ರೀ ಬಿ. ಜಿ. ಬಣಕಾರ್.—ನಮಗೆ ಎರಡೂ ಕಾಲೇಜುಗಳು ನಡೆದರೂ ಸಂತೋಷವೇ.

ವಿಷಯ : ತುಮಕೂರು ರಸ್ತೆಯಲ್ಲಿರುವ ದೀಪಕ್ ಇನ್ಸುಲೇಟೆಡ್ ಕೇಬಲ್ ಕಾರ್ಪೊರೇಷನ್ ಲಿಮಿಟೆಡ್ ಕಾರ್ಖಾನೆಯ ಕಾರ್ಮಿಕರು ಮುಷ್ಕರ ನಡೆಸಿರುವ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ತುಮಕೂರು ರಸ್ತೆಯಲ್ಲಿರುವ ದೀಪಕ್ ಇನ್ಸುಲೇಟೆಡ್ ಕೇಬಲ್ ಫ್ಯಾಕ್ಟರಿಯ ನಾಲ್ಕುನೂರು ಕಾರ್ಮಿಕರು ಮುಷ್ಕರ ನಡೆಸಿರುವುದರ ಬಗ್ಗೆ ಮಾನ್ಯ ಕಾರ್ಮಿಕ ಹಾಗೂ ಪರ್ಸ್ಸ್ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ವಾರ್ತಾ ಮತ್ತು ಪ್ರಚಾರೋದ್ಯಮ ಸಚಿವರು) (ಕಾರ್ಮಿಕ ಮಂತ್ರಿಗಳ ಪರವಾಗಿ).—ದೀಪಕ್ ಇನ್ಸುಲೇಟೆಡ್ ಕೇಬಲ್ ಕಾರ್ಪೊರೇಷನ್ ಲಿಮಿಟೆಡ್ ಎಂಬ ಸಂಸ್ಥೆಯು ಬೆಂಗಳೂರು ತುಮಕೂರು ರಸ್ತೆಯಲ್ಲಿ 8ನೇ ಒಮ್ಮಲಿ ಕಲ್ಲಿನ ಹತ್ತಿರ ಇದೆ. ತಮ್ಮ ಬೇಡಿಕೆಗಳನ್ನು ಆಡಳಿತ ವರ್ಗದವರು ಪುರಸ್ಕರಿಸಲಿಲ್ಲವೆಂದು ಕೆಲಸಗಾರರು 25-6-1983ರಿಂದ ಮುಷ್ಕರಕ್ಕೆ ಕರೆ ನೀಡಿದರು. ಕೆಲಸಗಾರರನ್ನು ದೀಪಕ್ ಇನ್ಸುಲೇಟೆಡ್ ಕೇಬಲ್ ಕಾರ್ಪೊರೇಷನ್ ಲಿಮಿಟೆಡ್ ಎಂಪ್ಲಾಯೀಸ್ ಅಸೋಸಿಯೇಷನ್ ಎಂಬ ಕಾರ್ಮಿಕ ಸಂಘವು ಪ್ರತಿನಿಧಿಸುತ್ತದೆ. ಕೆಲಸಗಾರರು ಹಿಂದಿನ ಒಪ್ಪಂದದ ಅವಧಿ ಮುಗಿದ ನಂತರ ಹೊಸ ಬೇಡಿಕೆಗಳ ಪಟ್ಟಿಯನ್ನು ಇಟ್ಟಿದ್ದಾರೆ. ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಮಧ್ಯೆ ಹಲವಾರು ಮಾತುಕತೆಗಳು ನಡೆದವು. ಮೂಲ ವೇತನದಲ್ಲಿ ಹೆಚ್ಚಳ, ಇಂಕ್ರಿಮೆಂಟ್, ತುಟ್ಟಿಭತ್ಯ ಹೆಚ್ಚಳ, ಮನೆ ಬಾಡಿಗೆ ಭತ್ಯ, ಸಾರಿಗೆ ಸೌಲಭ್ಯ ಇತ್ಯಾದಿ 22 ಬೇಡಿಕೆಗಳನ್ನು ಕೆಲಸಗಾರರು ಒಡ್ಡಿದ್ದಾರೆ. ಇವುಗಳಲ್ಲಿ ಮುಖ್ಯವಾದ ಬೇಡಿಕೆಗಳೆಂದರೆ ಮೂಲ ವೇತನದಲ್ಲಿ ಹೆಚ್ಚಳ, ತುಟ್ಟಿಭತ್ಯ ಹೆಚ್ಚಳ, ಮನೆಬಾಡಿಗೆ ಭತ್ಯ ಮತ್ತು ಕ್ಯಾಂಟೀನ್ ಸೌಲಭ್ಯ ಇವೇ ಆಗಿವೆ. ಸಂಧಾನಾಧಿಕಾರಿಗಳ ಮುಂದೆ ಆಡಳಿತ ವರ್ಗದವರು ಹೇಳಿಕೆ ನೀಡಿ ಅವರ ಹಣಕಾಸಿನ ಪರಿಸ್ಥಿತಿ ಚೆನ್ನಾಗಿ ಇಲ್ಲವಾದಕಾರಣ ಯಾವ ಹೆಚ್ಚಳವನ್ನೂ ಕೊಡಲಾಗುವುದಿಲ್ಲವೆಂದೂ ಈ ಬೇಡಿಕೆಗಳ ಪಟ್ಟಿಯನ್ನು 4 ವರ್ಷಗಳ ಕಾಲ ಮುಂದಕ್ಕೆ ಹಾಕಬೇಕೆಂದೂ ಮತ್ತು 4 ವರ್ಷಗಳ ಕಾಲ ಸಂಬಳಸಾರಿಗೆಯ ಸ್ಥಗಿತವಾಗಬೇಕೆಂದೂ ಹೇಳಿದ್ದಾರೆ. ತಂತಿಗಳನ್ನು ತಯಾರು ಮಾಡುವ ಅವರ ಉದ್ಯಮವು ಬಹಳ ಶೋಚನೀಯ ಪರಿಸ್ಥಿತಿಯಲ್ಲಿ ಇದೆ ಎಂದೂ ಎಕ್ಸೈಸ್ ತೆರಿಗೆ ಸಿಗದೆ ಇರುವ ಸಣ್ಣ ಸಣ್ಣ ಉದ್ಯಮಗಳಿಂದ ಅವರಿಗೆ ತೊಂದರೆಯಾಗುತ್ತಿದೆ ಎಂದೂ ಜೊತೆಗೆ ವಿದ್ಯುಚ್ಛಕ್ತಿಯ ಕಡಿತದಿಂದಾಗಿಯೂ ಅವರ ಉದ್ಯಮಕ್ಕೆ ಬಹಳ ದಕ್ಕೆಯಾಗಿದೆ ಎಂದೂ ಹೇಳಿದ್ದಾರೆ.

ಬೆಂಗಳೂರು 1ನೇ ವಿಭಾಗದ ಸಹಾಯಕ ಕಾರ್ಮಿಕ ಕಮಿಷನರ್‌ರವರು ಈ ವಿವಾದಗಳ ಸಂಧಾನವನ್ನು ಎತ್ತಿಕೊಂಡಿದ್ದರು. 2-7-1983, 7-7-1983, 14-7-1983, 23-7-1983, 25-7-1983, ಈ ದಿನಾಂಕಗಳಲ್ಲಿ ಅನೇಕ ಸಂಧಾನ ಸಭೆಗಳು ನಡೆದಿವೆ. ಆದರೆ 2 ವರ್ಗಗಳ ಬಿಗಿಯಾದ ಪಟ್ಟಿನಿಂದ ಯಾವ ಒಪ್ಪಂದವೂ ಸಾಧ್ಯವಾಗಲಿಲ್ಲ. ಸಹಾಯಕ ಕಾರ್ಮಿಕ ಕಮಿಷನರ್‌ರವರು ವಿಫಲ ವರದಿಯನ್ನು ಕಳುಹಿಸಿದ್ದಾರೆ. ಸಂಧಾನದ ಮುಂದಿನ ಪ್ರಯತ್ನಗಳನ್ನು ಬೆಂಗಳೂರಿನ 1ನೇ ವಿಭಾಗದ ಡೆಪ್ಯೂಟಿ ಲೇಬರ್ ಕಮಿಷನರ್‌ರವರು ಮಾಡುತ್ತಿದ್ದಾರೆ. ಸಮಸ್ಯೆಯ ಪರಿಹಾರಕ್ಕೆ ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಈ ಅವಧಿ ಮುಗಿದ ನಂತರ ಹೊಸ ಬೇಡಿಕೆಗಳ ಪಟ್ಟಿಯನ್ನು ಇಟ್ಟಿದ್ದಾರೆ ಎಂದು ಹೇಳಿದ್ದೀರಿ. ಆ ಅವಧಿ ಯಾವಾಗ ಮುಗಿಯಿತು ? ಯಾವಾಗ ಅವರು ಪಟ್ಟಿಯನ್ನು ಇಟ್ಟಿದ್ದಾರೆ ಎಂದು ಹೇಳುವುದಕ್ಕೆ ಆಗುತ್ತದೆಯೇ ? ಇದು ಮೊದಲನೆಯ ಪ್ರಶ್ನೆ. ಎರಡನೆಯ ಪ್ರಶ್ನೆ ಎಂದರೆ ಸಂಧಾನ ಅಧಿಕಾರಿಗಳ ಮುಂದೆ ಆಡಳಿತ ವರ್ಗದವರು ಹೇಳಿಕೆ ನೀಡಿ ಅವರ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲವೆಂದು ಹೇಳಿದ್ದಾರೆಂದು ತಿಳಿಸಿದ್ದೀರಿ. ಆ ಮಾಲೀಕರು ಹೇಳಿರುವುದನ್ನೇ ಸರ್ಕಾರ ಒಪ್ಪಿಕೊಳ್ಳುತ್ತದೆಯೇ ? ಸರ್ಕಾರಕ್ಕೆ ಬೇರೆ ಏನಾದರೂ ಅಭಿಪ್ರಾಯ ಇದೆಯೇ ? ಮತ್ತು ಸಂಧಾನಾಧಿಕಾರಿಗಳ ಮುಂದೆ ಸಂಬಂಧಪಟ್ಟ ಕಾರ್ಮಿಕ ಸಂಘದವರು ಹೋಗಿ ಅದು ಎ.ಐ.ಯು.ಟಿ.ಸಿ. ಸಂಘ ಯಾವುದು ಇದೆ. ಆ ಸಂಘದವರು ಉತ್ಪಾದನೆ ಜಾಸ್ತಿಯಾಗಿದೆ, ಡಿವಿಡೆಂಡ್ ಜಾಸ್ತಿಯಾಗಿದೆ ಮತ್ತು ಇದರ ಸೇಲ್ಸ್ ಜಾಸ್ತಿಯಾಗಿದೆ ಇವೆಲ್ಲವನ್ನೂ ಸಂಧಾನಾಧಿಕಾರಿಗಳ ಮುಂದೆ ಕೊಡಲಿಲ್ಲವೇ? ನೀವೇನಾದರೂ ಇವರಿಗೆ ನ್ಯಾಯವಾಗಿ